## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಮುಳಬಾಗಿಲು.

ಸಿ.ಸಿ.ನಂಃ **56/2024**

| | | |
|---|---|---|
| ಫಿರ್ಯಾದುದಾರರು | : | ವೆಂಕಟೇಶಪ್ಪ,<br>ಬಿನ್ಃ ಲೇಟ್ ವೆಂಕಟಪ್ಪ. |

-ವಿರುದ್ಧ-

| | | |
|---|---|---|
| ಆರೋಪಿ | : | ಯಲ್ಲಪ್ಪ ಎಸ್.ಎನ್,<br>ಬಿನ್ಃ ಎಸ್.ಟಿ. ನಾರಾಯಣಸ್ವಾಮಿ. |

### ದಂಡ ಪ್ರಕ್ರಿಯಾ ಸಂಹಿತೆ ಕಲಂ-251 ರ ಪ್ರಕಾರ ಆರೋಪಣೆ

ಆರೋಪಿಯಾದ ನೀವು, ಫಿರ್ಯಾದುದಾರರಿಂದ ಪಡೆದುಕೊಂಡ ಸೂಕ್ತ ಮೌಲ್ಯವುಳ್ಳ ಪ್ರತಿಫಲದ ಬಾಬ್ತು ಅವರಿಗೆ ಕೊಡಬೇಕಾಗಿರುವ ಹಣದ ಮರು-ಪಾವತಿಗಾಗಿ ಶ್ರೀನಿವಾಸಪುರ ತಾಲೂಕಿನ ಯಲ್ದೂರು ಅಂಚೆಯ, ಸೀಗೇಹಳ್ಳಿ ಶಾಖೆಯ ಬ್ಯಾಂಕ್ ಆಫ್ ಬರೋಡಾ ಬ್ಯಾಂಕಿನ ಮುಂದಿನ ದಿನಾಂಕ ನಮೂದಿಸಿದ ಚೆಕ್ ನಂ.**008622**, ದಿನಾಂಕಃ**14.12.2023** ರ ಚೆಕ್ಕನ್ನು ರೂ.**9,60,000/-** (ಒಂಭತ್ತು ಲಕ್ಷ ಅರವತ್ತು ಸಾವಿರ ರೂಪಾಯಿ)ಗಳಿಗೆ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದುದಾರರು ನಗದುಗೊಳಿಸಲು ಮುಳಬಾಗಿಲು ಶಾಖೆಯ ಎಸ್.ಬಿ.ಐ ಬ್ಯಾಂಕ್ ಇಲ್ಲಿಗೆ ಹಾಜರುಪಡಿಸಿದಾಗ, ಸದರಿ ಚೆಕ್ಕು 'ಸಾಕಷ್ಟು ಹಣವಿಲ್ಲ' ಎಂಬ ಕಾರಣಕ್ಕಾಗಿ ಅನಾಧರಣಗೊಂಡಿರುತ್ತದೆ. ಈ ಬಗ್ಗೆ ಫಿರ್ಯಾದುದಾರರು ತಮ್ಮ ವಕೀಲರ ಮೂಲಕ ನೋಟೀಸ್ ದಿಃ**29.12.2023** ರಂದು ನೀಡಿ, ಸದರಿ ಸಂಗತಿಯನ್ನು ತಿಳಿಸಿದಾಗ್ಯೂ ಸಹ ನೀವು ಫಿರ್ಯಾದುದಾರರಿಗೆ ನಿಯಮಿತ ಅವಧಿಯಲ್ಲಿ ಹಣವನ್ನು ಸಂದಾಯ ಮಾಡುವಲ್ಲಿ ವಿಫಲರಾಗಿರುತ್ತೀರಿ. ಆ ಕಾರಣದಿಂದ, ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಾಯ್ದೆಯ ಕಲಂ-138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಅಂತ ನಿಮ್ಮ ವಿರುದ್ಧ ಆರೋಪಣೆ ಹೊರಿಸಲಾಗಿದೆ.

ಪ್ರಃ1 ಮೇಲಿನ ಆರೋಪಣೆಯನ್ನು ಓದಿ ವಿವರಿಸಿದ್ದು ಅರ್ಥವಾಯಿತೇ?

ಉಃ

ಪ್ರಃ2 ಮೇಲಿನ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೇ?
ಉಃ

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ವಿವರಿಸಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

(ಹರೀಶ್ ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಮುಳಬಾಗಿಲು.

ದಿಃ**15.09.2025**

ಆರೋಪಿ ಸಹಿ